ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು – 560 001

ಸಂಖ್ಯೆ:ಸಿ8[7]ಶಾಶಿಅ:ಹೊ.ಶಾ.ಪ್ರಾ:ಅನು:130:2010–11 ದಿನಾಂಕ: 19 . 9 .2011

ಸುತ್ತೋಲೆ

ವಿಷಯ: ಶಾಶ್ವತ ಅನುದಾನ ರಹಿತ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು ಅನುಸರಿಸಬೇಕಾದ ಮಾರ್ಗಸೂಚಿ

ಉಲ್ಲೇಖ:
1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 122 ಎಸ್‌ಇಎಸ್ 2007 ದಿ: 17.05.2007
2. ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 44 ಎಸ್‌ಎಲ್‌ಬಿ 2007 ದಿ: 03.09.2007[ಭಾಗ]
3. ಈ ಕಛೇರಿಯ ನಡಾವಳಿ ಪತ್ರ ಸಂಖ್ಯೆ: ಸಿ8[3] ಶಾಶಿಅ ಓ ಪ್ರ ಶಾ ಮಾರ್ಗಸೂಚಿ 2005–06 ದಿ: 07.06.2005

ಪ್ರತಿ ವರ್ಷ ಅನೇಕ ಖಾಸಗಿ ಶಿಕ್ಷಣ ಸಂಸ್ಥೆಗಳು ಹೊಸ ಪ್ರೌಢಶಾಲೆಗಳನ್ನು ಪ್ರಾರಂಭಿಸಲು ಪ್ರಸ್ತಾವನೆಗಳನ್ನು ಸಲ್ಲಿಸುತ್ತಿದ್ದಾರೆ. ಮೇ 30 ರಿಂದ ಶಾಲೆಗಳು ಪ್ರಾರಂಭಗೊಳ್ಳುತ್ತಿದ್ದು, ಈ ದಿನಾಂಕದ ನಂತರವೂ ಅರ್ಜಿಗಳನ್ನು ಸಲ್ಲಿಸುತ್ತಿರುವುದು ಕಂಡು ಬಂದಿದೆ. ಹಲವು ಕಾರಣಗಳಿಂದ ಉಪನಿರ್ದೇಶಕರು ಮತ್ತು ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಹಂತದಲ್ಲಿ ಪರಿಶೀಲಿಸಲ್ಪಟ್ಟು ಜೂನ್ ನಂತರವೂ ಮಂಜೂರಾತಿ ಆದೇಶಗಳನ್ನು ನೀಡಲಾಗುತ್ತಿದೆ. ಹಲವು ಕಾರಣಗಳಿಂದ ಆದೇಶ ನಿಧಾನವಾಗಿ ದೊರಕುತ್ತಿರುವುದರಿಂದ ಹೊಸ ಶಾಲೆಗಳಿಗೆ ವಿದ್ಯಾರ್ಥಿಗಳು ದೊರಕುತ್ತಿಲ್ಲ. ಇದರಿಂದ ಶಾಲೆಗಳು ರದ್ದಾಗುವುದು ಮತ್ತು ವಿದ್ಯಾರ್ಥಿಗಳ ದಾಖಲಾತಿ ಮನ್ನಾ ನೀಡುವ ಪರಿಸ್ಥಿತಿ ಉಂಟಾಗುತ್ತದೆ. ಈ ರೀತಿಯ ವ್ಯರ್ಥ ಕ್ರಮವನ್ನು ತಪ್ಪಿಸಬೇಕಾಗಿದೆ. ಹೊಸ ಶಾಲೆಗಳು ಪ್ರಾರಂಭಿಸಲು ಶಿಫಾರಸ್ಸು ಮಾಡುವಾಗ ವಸ್ತು ಸ್ಥಿತಿ ಅಂಶಗಳನ್ನು ಗಮನಿಸಬೇಕಾಗಿದೆ.

ಉಲ್ಲೇಖ–1ರ ಸರ್ಕಾರದ ಅಧಿಸೂಚನೆಯಲ್ಲಿ ಹೊಸ ಪ್ರೌಢಶಾಲೆ ಪ್ರಾರಂಭಿಸಲು ಅನುಮತಿ ನೀಡುವಾಗ ನೋಂದಣಿ ಪ್ರಾಧಿಕಾರ ಶಿಕ್ಷಣ ಕಾಯ್ದೆ ನಿಯಮದ ಮಾನದಂಡಗಳ ಅನ್ವಯ ಅನುಮತಿ ನೀಡಲು ಸೂಚಿಸಿದೆ. ಇದುವರೆವಿಗೂ ಸಲ್ಲಿಸಿರುವ ಪ್ರಸ್ತಾವನೆಗಳ ಪರಿಶೀಲನೆಯಲ್ಲಿ ಗಮನಿಸಿರುವಂತೆ ಜಿಲ್ಲಾ ಸಮಿತಿಯು ನಿಖರ ಮತ್ತು ಸ್ಪಷ್ಟ ಸ್ಥಳ ಪರಿಶೀಲನಾ ವರದಿ ನೀಡದಿರುವುದು, ಉಪನಿರ್ದೇಶಕರು ನಿಯಮಗಳಂತೆ ಮಾಹಿತಿ ಬರಿಸದೇ ಇರುವುದು, ಇಂತಹ ಕಾರಣದಿಂದ ನಿಗದಿತ ಅವಧಿಯೊಳಗೆ ನೋಂದಣಿ ಅನುಮತಿ ನೀಡಲು ವಿಳಂಬವಾಗುತ್ತದೆ.

ಉಲ್ಲೇಖ–2ರ ಸರ್ಕಾರದ ಸುತ್ತೋಲೆಯಲ್ಲಿನ ಅನುಬಂಧ–1ರ ಚೆಕ್‌ಲಿಸ್ಟ್ ಅನ್ವಯ ಮಾಹಿತಿಯೊಂದಿಗೆ ಹಾಗೂ ಜಿಲ್ಲಾ ಸಮಿತಿಯು ಸುತ್ತೋಲೆಯಲ್ಲಿರುವ [ಉಲ್ಲೇಖ (3)ರ] ಪಟ–1ರಲ್ಲಿ ಮೌಲ್ಯಾಂಕ ವರದಿ ನೀಡಬೇಕಾಗಿದೆ. ಪಟ್ಟಿಯಲ್ಲಿ ಎಲ್ಲಾ ಸದಸ್ಯರು ಸಹಿ ಮಾಡಬೇಕು. ಪ್ರೌಢಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಶಿಕ್ಷಣ ಕಾಯ್ದೆ ನಿಯಮಗಳನ್ವಯ ಪ್ರಸ್ತಾವನೆ ಸಲ್ಲಿಸುವ ವಿವಿಧ ಹಂತದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿ ವೇಳಾಪಟ್ಟಿಯನ್ನು ಅನುಬಂಧ–1 ಮತ್ತು 2ರಲ್ಲಿ ನೀಡಲಾಗಿದೆ. ಅದರಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

19.9.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

16-9-11

ಗೆ

1. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಉಪನಿರ್ದೇಶಕರು[ಆಡಳಿತ] ರವರಿಗೆ
2. ಬೆಂಗಳೂರು/ಮೈಸೂರು ವಿಭಾಗದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ
3. ಕಛೇರಿ ಪ್ರತಿ.

D:\DPP\852-2011.doc

ಅನುಬಂಧ-1

ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತ ಪ್ರೌಢಶಾಲೆ ಪ್ರಾರಂಭಿಸಲು ಅನುಮತಿಸುವಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು:-

ಪ್ರೌಢಶಿಕ್ಷಣ ಬಯಸುವ ವಿದ್ಯಾರ್ಥಿಗಳ ಸಂಖ್ಯೆ ಪ್ರತಿ ವರ್ಷ ಹೆಚ್ಚಾಗುತ್ತಿರುವುದರಿಂದ ಹಾಗೂ ನಗರ ಪ್ರದೇಶದಲ್ಲಿ ಜನ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹೊಸದಾಗಿ ಪ್ರೌಢಶಾಲೆ ಪ್ರಾರಂಭಿಸುವುದು ಅನಿವಾರ್ಯವಾಗಿರುತ್ತದೆ. ಎಲ್ಲಾ ಮಕ್ಕಳಿಗೂ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಖಾಸಗಿ ಸಂಸ್ಥೆಗಳಿಗೂ ಹೊಸ ಶಾಲೆ ಪ್ರಾರಂಭಿಸಲು ಶಿಕ್ಷಣ ಕಾಯ್ದೆ 1983ರ ನಿಯಮ 31ರಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಶಾಲಾ ಪ್ರಾರಂಭಕ್ಕೆ ಅನುಸರಿಸುತ್ತಿರುವ ಮಾರ್ಗಸೂಚಿಗಳನ್ನು ಸರಳೀಕರಣ ಹಾಗೂ ಪಾರದರ್ಶಕತೆಯನ್ನು ಹೆಚ್ಚಿಸಲು ಕೆಳಗೆ ನಮೂದಿಸಿದಂತೆ ಮಾರ್ಗಸೂಚಿ ರಚಿಸಲಾಗಿದೆ.

[1] ಜಿಲ್ಲಾ ಮಟ್ಟದಲ್ಲಿ ಅನುಸರಿಸಬೇಕಾದ ಮಾರ್ಗಸೂಚಿಗಳು

1. ಜಿಲ್ಲಾ ಉಪನಿರ್ದೇಶಕರು[ಆಡಳಿತ] ಹೊಸದಾಗಿ ಶಾಲೆ ಪ್ರಾರಂಭಿಸಲು ಶಿಕ್ಷಣ ಕಾಯ್ದೆ 1995 ಹಾಗೂ ನೋಂದಣಿ ನಿಯಮ ಮೂರು, ನಾಲ್ಕರ ಪ್ರಕಾರ ತಮ್ಮ ಅಧ್ಯಕ್ಷತೆಯಲ್ಲಿ ಜಿಲ್ಲಾ ಪರಿಶೀಲನಾ ಸಮಿತಿಯನ್ನು ರಚಿಸುವುದು. [ಹೊಸ ಪ್ರೌಢಶಾಲೆಗಳ ಪರಿಶೀಲನಾ ಸಮಿತಿ]

   ಜಿಲ್ಲಾ ಪರಿಶೀಲನಾ ಸಮಿತಿಯಲ್ಲಿ ಕೆಳಕಂಡಂತೆ ಸದಸ್ಯರನ್ನು ನೇಮಕ ಮಾಡಿಕೊಳ್ಳುವುದು.

   [ಅ] ಉಪನಿರ್ದೇಶಕರ ಕಛೇರಿಯ ಶಿಕ್ಷಣಾಧಿಕಾರಿಗಳು

   [ಆ] ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಹಿರಿಯ ಉಪನ್ಯಾಸಕರು

   [ಇ] ಜಿಲ್ಲೆಯ ಸರ್ಕಾರಿ ಪ್ರೌಢಶಾಲೆಯ ಹಿರಿಯ ಮುಖ್ಯ ಶಿಕ್ಷಕರು

   [ಈ] ಶಿಕ್ಷಣ ಮಹಾವಿದ್ಯಾಲಯಗಳು ಇರುವಂತಹ ಜಿಲ್ಲೆಗಳಲ್ಲಿನ ಒಬ್ಬ ರೀಡರ್

2. ಹೊಸ ಪ್ರೌಢಶಾಲೆಗಳ ಮಂಜೂರಾತಿಗೆ ನಿಗಧಿಪಡಿಸಿದ ಅನುಬಂಧ-2ರಲ್ಲಿನ ವೇಳಾಪಟ್ಟಿಯನ್ನು ಪ್ರಕಟಿಸುವುದು.
3. ವೇಳಾಪಟ್ಟಿಯಂತೆ ಹೊಸ ಪ್ರೌಢಶಾಲೆಗಳ ಪ್ರಸ್ತಾವನೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಜಿಲ್ಲಾ ಉಪನಿರ್ದೇಶಕರಿಗೆ ಸಲ್ಲಿಸಲು ವ್ಯಾಪಕ ಪ್ರಚಾರ ಮಾಡುವುದು. ನಿಗದಿತ ವೇಳಾಪಟ್ಟಿಯ ನಂತರ ಬರುವಂತಹ ಪ್ರಸ್ತಾವನೆಗಳನ್ನು ಜಿಲ್ಲಾ ಉಪನಿರ್ದೇಶಕರ ಹಂತದಲ್ಲೇ ತಿರಸ್ಕರಿಸುವುದು. ತಿರಸ್ಕರಿಸುವಾಗ ನಿಗದಿತ ಅವಧಿಯೊಳಗೆ ಸಲ್ಲಿಸಿಲ್ಲ ಎಂಬ ಕಾರಣವನ್ನು ಮಾತ್ರ ನೀಡುವುದು.
4. ಹೊಸ ಪ್ರೌಢಶಾಲೆಗಳ ಪ್ರಾರಂಭದ ಪ್ರಸ್ತಾವನೆಯನ್ನು ಉಪನಿರ್ದೇಶಕರು, ಜಿಲ್ಲಾ ಪರಿಶೀಲನಾ ಸಮಿತಿಗೆ ನಿಗದಿತ ಸಮಯಕ್ಕೆ ಕಳುಹಿಸಿ ಜಿಲ್ಲಾ ಪರಿಶೀಲನಾ ಸಮಿತಿಯು ಶಿಕ್ಷಣ ಕಾಯ್ದೆ ನಿಯಮಗಳಡಿ ಸ್ಥಳ ಪರಿಶೀಲಿಸಿ ನಿಗದಿತ ಅವಧಿಯೊಳಗೆ ಜಿಲ್ಲಾ ಸಮಿತಿಯು ಉಪನಿರ್ದೇಶಕರಿಗೆ ಪರಿಶೀಲನಾ ಸಮಿತಿಯು ವರದಿ ನೀಡತಕ್ಕದ್ದು.
5. ಜಿಲ್ಲಾ ಪರಿಶೀಲನಾ ಸಮಿತಿಯು ಈ ಕೆಳಕಂಡ ಮುಖ್ಯ ಅಂಶಗಳನ್ನು ವಿಶೇಷವಾಗಿ [ಕಡ್ಡಾಯವಾಗಿ] ಪರಿಶೀಲಿಸುವುದು.
6. ಸರ್ಕಾರದ ಸುತ್ತೋಲೆ ದಿ:03.09.2007ರ ಪಟ್ಟಿ-1ರ ಮೌಲ್ಯಾಂಕದ ವಿವರ.
   - ➢ ಪ್ರಸ್ತಾಪಿತ ಸ್ಥಳದಲ್ಲಿ ಜನ ಸಂಖ್ಯೆ ಪ್ರಮಾಣ ಹಾಗೂ ಈಗಾಗಲೇ ನಡೆಯುತ್ತಿರುವ ಪ್ರೌಢಶಾಲೆಗಳನ್ನು ಗಣನೆಗೆ ತೆಗೆದುಕೊಂಡು ಆ ಸ್ಥಳದಲ್ಲಿ ಮತ್ತೊಂದು ಹೊಸ ಪ್ರೌಢಶಾಲೆ ಅಗತ್ಯತೆ ಇರುವ ಬಗ್ಗೆ ಖಚಿತಪಡಿಸಿಕೊಳ್ಳುವುದು.
   - ➢ ಸಂಸ್ಥೆಯು ಜಿಲ್ಲಾ ಸಂಘ ಸಂಸ್ಥೆಗಳ ನೋಂದಣಿ ಅಧಿಕಾರಿಗಳ ಕಛೇರಿಯಲ್ಲಿ ನೊಂದಾಯಿಸಿಕೊಂಡಿರುವ ಬಗ್ಗೆ ಹಾಗೂ ಸಂಸ್ಥೆಯನ್ನು ಕಾಲ ಕಾಲಕ್ಕೆ ನವೀಕರಿಸಿಕೊಂಡಿರುವ ಬಗ್ಗೆ ಪರಿಶೀಲಿಸುವುದು.
   - ➢ ಕಟ್ಟಡ ಮತ್ತು ಮೂಲಭೂತ ಸೌಕರ್ಯ ಒದಗಿಸಿರುವ ಬಗ್ಗೆ ಪರಿಶೀಲಿಸುವುದು. [ಪ್ರತಿ ಮಗುವಿಗೆ 6 ಚದರ ಅಡಿಯಂತೆ].
   - ➢ ಗಂಡು ಮಕ್ಕಳಿಗೆ ಹಾಗೂ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾಗಿ ಶೌಚಾಲಯ ಸೌಲಭ್ಯ ಒದಗಿಸಿರುವುದನ್ನು ಪರಿಶೀಲಿಸುವುದು.
   - ➢ ಸಂಸ್ಥೆಯ ಆರ್ಥಿಕ ಸದೃಢತೆ ಬಗ್ಗೆ ನಿಯಮ 4[ಬಿ][1] ರಂತೆ ಪರಿಶೀಲಿಸುವುದು

- ಜಿಲ್ಲಾ ಸಮಿತಿ ವರದಿ ಆಧಾರದ ಮೇರೆಗೆ ಉಪನಿರ್ದೇಶಕರು ನಮೂನೆ-2ರಲ್ಲಿ ಎಲ್ಲಾ ಕಾಲಂಗಳನ್ನು ಸೂಕ್ತ ಮಾಹಿತಿಯೊಂದಿಗೆ ತಪ್ಪದೆ ನಮೂದಿಸುವುದು. ಯಾವುದನ್ನೂ ಖಾಲಿ ಬಿಡಬಾರದು. ನಮೂನೆಯಲ್ಲಿನ ಪ್ರತಿ ಮಾಹಿತಿಗೆ ಅನುಬಂಧ ಸಂಖ್ಯೆ ನೀಡಿ ಕಾಲಂನಲ್ಲಿ ನಮೂದಿಸುವುದು. ***[ಲಗತ್ತಿಸಿದೆ, ಹೌದು, ಇಲ್ಲ ಎಂಬಂತಹ ಉತ್ತರಗಳನ್ನು ಬರೆಯಕೂಡದು. ಕಾಲಂನಲ್ಲಿ ಕೇಳಿರುವಂತಹ ಎಲ್ಲಾ ಮಾಹಿತಿಗಳ ಬಗ್ಗೆ ಸ್ಪಷ್ಟ ವಿವರಣೆಯನ್ನು ಪೂರ್ಣವಾಗಿ ನಮೂದಿಸುವುದು]***
- ಶಾಲೆಯ ಕಟ್ಟಡ ಸುರಕ್ಷತೆ ಬಗ್ಗೆ, ಬೆಂಕಿ, ಬಿರುಗಾಳಿ ವಿದ್ಯುತ್ ಅಪಘಾತ ಮುಂತಾದ ಅವಗಡಗಳಿಂದ ಸುರಕ್ಷಿತವಾಗಿರುವ ಬಗ್ಗೆ ಖಚಿತಪಡಿಸಿಕೊಂಡು ದೃಢೀಕರಿಸುವುದು. ಅಗ್ನಿನಂದಕಗಳನ್ನು ಅಳವಡಿಸಿರುವ ಕುರಿತು ಪ್ರಸ್ತಾಪಿಸತಕ್ಕದ್ದು.
- ಸರ್ಕಾರದ ಸುತ್ತೋಲೆ ದಿ:03.09.2007ರಲ್ಲಿನ ಪಟ್ಟಿ-1ರಂತೆ ಪರಿಶೀಲಿಸಿ ವಸ್ತು ನಿಷ್ಠ ಮೌಲ್ಯಾಂಕ ವರದಿ ನೀಡುವುದು.

ಜಿಲ್ಲಾ ಸಮಿತಿಯು ಸಂಬಂಧಿಸಿದ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಯೋಗದೊಂದಿಗೆ ಸ್ಥಳ ಪರಿಶೀಲಿಸುವುದು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪ್ರಸ್ತಾವನೆಯಲ್ಲಿನ ಎಲ್ಲಾ ದಾಖಲೆಗಳನ್ನು ದೃಢೀಕರಿಸುವುದು. ಕ್ಷೇತ್ರ ಶಿಕ್ಷಣಾಧಿಕಾರಿಗಳು ದೃಢೀಕರಿಸಿದ ಎಲ್ಲಾ ದಾಖಲೆಗಳನ್ನು ಉಪನಿರ್ದೇಶಕರು ಮೇಲು ಸಹಿ ಮಾಡುವುದು.

ಜಿಲ್ಲಾ ಸಮಿತಿ ವರದಿಯು ಅಸ್ಪಷ್ಟ ಹಾಗೂ ನಿಖರವಾಗಿಲ್ಲದಿದ್ದರೆ ಸಂಬಂಧಿಸಿದ ಜಿಲ್ಲಾ ಸಮಿತಿ ಸದಸ್ಯರನ್ನು ನೇರ ಹೊಣೆಗಾರರನ್ನಾಗಿ ಮಾಡಲಾಗುವುದು. ಸಮಿತಿಯು ಸಲ್ಲಿಸಿರುವ ಪ್ರಸ್ತಾವನೆಯನ್ನು ಜಿಲ್ಲಾ ಉಪನಿರ್ದೇಶಕರು, ಕೂಲಂಕಷವಾಗಿ ಎಲ್ಲಾ ದಾಖಲೆಗಳೊಂದಿಗೆ ಪರಿಶೀಲಿಸಿ ಅಧಿಕೃತ ವೇಳಾಪಟ್ಟಿಯಂತೆ ನಮೂನೆ-2ರಲ್ಲಿ ಹಾಗೂ ಸರ್ಕಾರದ ಸುತ್ತೋಲೆ ದಿ:03.09.2007ರ ಅನುಬಂಧ-1ರ ವರದಿಯೊಂದಿಗೆ ಸ್ಪಷ್ಟ ಅಭಿಪ್ರಾಯದೊಂದಿಗೆ ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಕಾರ್ಯಾಲಯಕ್ಕೆ ಸಲ್ಲಿಸುವುದು. ನಿಗಧಿತ ಅವಧಿ ನಂತರ ಯಾವುದೇ ಪ್ರಸ್ತಾವನೆಗಳನ್ನು ಸಲ್ಲಿಸಬಾರದು.

- ಅಲ್ಲದೇ ಯಾವುದೇ ನೆಪದಲ್ಲಿ ತಡವಾದ ಹಾಗೂ ಅಪೂರ್ಣ ಮಾಹಿತಿ ಕಳುಹಿಸಿದಲ್ಲಿ ಅಂತಹ ಅಧಿಕಾರಿಗಳ ವಿರುದ್ಧ ಕರ್ತವ್ಯ ಲೋಪವೆಂದು ಭಾವಿಸಿ ಶಿಸ್ತಿನ ಕ್ರಮ ಜರುಗಿಸಲಾಗುವುದು. ಇದಕ್ಕಾಗಿ ಪ್ರತಿ ಜಿಲ್ಲೆಯ ಹಲವು ಶಾಲೆಗಳಿಗೆ ಆಯುಕ್ತಾಲಯದಿಂದ ಭೇಟಿ ನೀಡಿ ವಸ್ತು ನಿಷ್ಠತೆ ಬಗ್ಗೆ ಪರಿಶೀಲಿಸಲಾಗುವುದು.

[2] ಆಯುಕ್ತರು / ನಿರ್ದೇಶಕರು[ಪ್ರೌಢಶಿಕ್ಷಣ] ಇವರ ಹಂತದಲ್ಲಿ ಪರಿಶೀಲನೆ

ಜಿಲ್ಲಾ ಉಪನಿರ್ದೇಶಕರಿಂದ ಬಂದಂತಹ ಪ್ರಸ್ತಾವನೆಗಳನ್ನು ಪರಿಶೀಲಿಸಿ ಶಿಕ್ಷಣ ಕಾಯ್ದೆ ನಿಯಮದಂತೆ ಪ್ರೌಢಶಾಲೆ ಪ್ರಾರಂಭಿಸಲು ಅನುಮತಿ ಅಥವಾ ತಿರಸ್ಕರಿಸುವ ಪ್ರಕ್ರಿಯೆಯನ್ನು ನಿಗಧಿತ ಅವಧಿಯೊಳಗೆ ಪೂರೈಸುವುದು.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

ಅನುಬಂಧ–2

## ಹೊಸ ಪ್ರೌಢಶಾಲೆಗಳಿಗೆ ಮಂಜೂರಾತಿ ನೀಡುವ ಸಂಬಂಧ ಅನುಸರಿಸಬೇಕಾದ ವೇಳಾಪಟ್ಟಿ

| | | |
|---|---|---|
| 1. | ಹೊಸ ಪ್ರೌಢಶಾಲೆಗಳು ಪ್ರಾರಂಭಿಸುವ ನಮೂನೆ–1ರಲ್ಲಿ ನೋಂದಣಿ ಫೀ ಯೊಂದಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | ಅಕ್ಟೋಬರ್ 30 |
| 2. | ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿಲ್ಲಾ ಉಪನಿರ್ದೇಶಕರುಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ | ನವೆಂಬರ್ 15ರೊಳಗಾಗಿ |
| 3. | ಜಿಲ್ಲಾ ಪರಿಶೀಲನಾ ಸಮಿತಿ ಸ್ಥಳ ಪರಿಶೀಲನಾ ವರದಿ ನೀಡುವ ಕೊನೆಯ ದಿನಾಂಕ | ಡಿಸೆಂಬರ್ 31 |
| 4. | ಉಪನಿರ್ದೇಶಕರು ಪ್ರಸ್ತಾವನೆಗಳನ್ನು ಆಯುಕ್ತರು/ನಿರ್ದೇಶಕರು [ಪ್ರೌಢಶಿಕ್ಷಣ] ಇವರಿಗೆ ಕಳುಹಿಸಲು ಕೊನೆಯ ದಿನಾಂಕ | ಜನವರಿ 31 |
| 5. | ಆಯುಕ್ತರವರು ಮಂಜೂರಾತಿ/ತಿರಸ್ಕೃತ ಆದೇಶ ನೀಡುವ ಕೊನೆಯ ದಿನಾಂಕ | ಮಾರ್ಚ್ 31 |
| 6. | ಹೊಸ ಪ್ರೌಢಶಾಲೆಯನ್ನು ಪ್ರಾರಂಭಿಸಲು ಅನುಮತಿ ಪಡೆದು ನಂತರ ಪ್ರಥಮ ಮಾನ್ಯತೆಗೆ ಮನವಿ ಸಲ್ಲಿಸಲು ಕೊನೆಯ ದಿನಾಂಕ | ಆಗಸ್ಟ್ 31 |
| 7. | ಉಪನಿರ್ದೇಶಕರು ಪ್ರಥಮ ಮಾನ್ಯತೆ ನೀಡಲು ಕೊನೆಯ ದಿನಾಂಕ | ಡಿಸೆಂಬರ್ 31 |

ಸೂಚನೆ:– ಅನುಬಂಧ–2ರ ವೇಳಾಪಟ್ಟಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಹಂತದಲ್ಲಿ ವಿವಿಧ ಮಾಧ್ಯಮಗಳ ಮುಖಾಂತರ ವ್ಯಾಪಕ ಪ್ರಚಾರ ಮಾಡುವುದು.

19.9

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ

16-09-11

D:\DPP\852-2011.doc